# ‘ನೋ’ ಜಾನಕಿ!

ಕಳೆದ ಗುರುವಾರ ಸಾಮಾಜಿಕ ಜಾಲತಾಣದಲ್ಲೊಂದು ಕೆಟ್ಟ ಸುದ್ದಿ– ಎಸ್.ಜಾನಕಿ ಹೋಗಿಬಿಟ್ಟರಂತೆ! ಹೌದಾ, ಏನಾಯ್ತು, ಎಲ್ಲಿ ಎಂದು ಸಾವಿರಾರು ಆತಂಕದ ಧ್ವನಿಗಳು, ಫೋನ್‌ಗಳ ಸುರಿಮಳೆ, ಜಾಲತಾಣಗಳಲ್ಲಿ ಸಂತಾಪಗಳ ಸರಮಾಲೆ! ಕೊನೆಗೆ ಸಂಜೆ ಹೊತ್ತಿಗೆ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ಸಿಟ್ಟಿಗೆದ್ದು ಟ್ವೀಟ್ ಮಾಡಿದರು– ‘ಎಲ್ಲ ಸುಳ್ಳು. ಈಗಷ್ಟೇ ಅವರ ಜತೆ ಮಾತನಾಡಿದ್ದೇನೆ. ಎಂದಿಗಿಂತ ಹೆಚ್ಚು ಆರೋಗ್ಯದಿಂದ ಇದ್ದಾರೆ. ಇದು ಯಾರೋ ಮೂರ್ಖರ ಕಿಡಿಗೇಡಿತನ. ಲಾಂಗ್ ಲಿವ್ ಮೆಲೊಡಿ ಕ್ವೀನ್..’ ಎಂದು. ಆ ಬಳಿಕ ಸುದ್ದಿ ತಣ್ಣಗಾಯಿತು. ಎಸ್ಪಿ ಅವರ ಕಾಮೆಂಟು ವೈರಲ್ ಆಯಿತು! ಹೀಗೆ ಒಮ್ಮಿಂದೊಮ್ಮೆಲೆ ನಿಧನದ ಸುದ್ದಿ ಹಬ್ಬಲೂ ಒಂದು ಕಾರಣವಿತ್ತು. ಅಂದು ಬೆಳಿಗ್ಗೆ ಅವರು ಸ್ಟುಡಿಯೋದಲ್ಲಿ ತಮ್ಮ ನಿವೃತ್ತಿಯನ್ನು ಘೋಷಿಸಿದ್ದರು. ‘ಇದೇ ನನ್ನ ಕೊನೆಯ ಹಾಡು. ಇನ್ನು ಮುಂದೆ ಯಾವುದೇ ರೆಕಾರ್ಡಿಂಗ್‌ನಲ್ಲಿ ಭಾಗವಹಿಸುವುದಿಲ್ಲ, ಕಾರ್ಯಕ್ರಮಗಳಲ್ಲಿ ಹಾಡುವುದಿಲ್ಲ. ಹಾಡು ಸಾಕಾಗಿದೆ. ನನಗೆ ವಿಶ್ರಾಂತಿ ಬೇಕಾಗಿದೆ’ ಎಂದಿದ್ದರು. ಅದು ‘ಪತ್ತ್ ಕಲ್ಪನಗಳ್’ ಎಂಬ ಮಲಯಾಳಂ ಚಿತ್ರದ ಹಾಡಿನ ರೆಕಾರ್ಡಿಂಗ್ ಸಂದರ್ಭ. ಹೀಗೆ ಅವರು ಘೋಷಿಸಿದ ನಿವೃತ್ತಿಯ ಮಾತುಗಳೇ ನವಮಾಧ್ಯಮಗಳ ಜಾಯಮಾನಕ್ಕೆ ತಕ್ಕಂತೆ ಸಾವಿನ ಸುಳ್ಳಾಗಿ ಹರಡಿತ್ತು.



60 ವರ್ಷಗಳಲ್ಲಿ 48,000 ಹಾಡುಗಳೆಂದರೆ ಸುಮ್ಮನೆ ಕುಶಾಲು ಅಲ್ಲ. ಎಂಥ ದೈತ್ಯರಿಗೂ ಸಾಕಾಗುವಂತಹದ್ದೇ. ಗುಂಟೂರು ಜಿಲ್ಲೆಯ ಸಣ್ಣ ಹಳ್ಳಿಯೊಂದರಲ್ಲಿ ಹುಟ್ಟಿ 3ರ ಎಳವೆಯಲ್ಲೇ ಸ್ಟೇಜ್ ಹತ್ತಿ ಹಾಡತೊಡಗಿದ ಜಾನಕಿ, ಬಳಿಕ ಹಿಂತಿರುಗಿ ನೋಡಿದವರಲ್ಲ. ಕಂಠಸಿರಿಯ ಬಗ್ಗೆ ಹೊಗಳಿಕೆ ಹೆಚ್ಚಾದಂತೆ 20ರ ಹರೆಯದಲ್ಲಿ ಚೆನ್ನೈಗೆ ಶಿಫ್ಟ್ ಆದರು. ಎವಿಯಂ ಸ್ಟುಡಿಯೋದಲ್ಲಿ ಗಾಯಕಿಯಾಗಿ ಸೇರಿದರು. ದಕ್ಷಿಣ ಭಾರತದ ಯಾವ ಸಿನಿಮಾದಲ್ಲೂ ಜಾನಕಿಯಮ್ಮನ ಹಾಡು ಇಲ್ಲದಿದ್ದರೆ ಆ ಸಿನಿಮಾನೇ ಅಪೂರ್ಣ ಎನ್ನುವಷ್ಟರ ಮಟ್ಟಿಗೆ ಖ್ಯಾತಿ ಹಬ್ಬಿತು.

ದೇಶ ವಿದೇಶಗಳ ಒಟ್ಟು 17 ಭಾಷೆಗಳಲ್ಲಿ ಜಾನಕಿಯಮ್ಮ ಹಾಡಿದ್ದಾರೆ. ಪುಟ್ಟ ಮಗುವಿನ ಮುಗ್ಧ ಸ್ವರ, ಹರೆಯದ ಹುಡುಗಿಯ ಮಾಧುರ್ಯ ಮತ್ತು ಇಳಿವಯಸ್ಸಿನ ವಿಷಾದ ಹೀಗೆ ಎಲ್ಲದಕ್ಕೂ ಜಾನಕಿಯವರ ಕಂಠವೇ ಬೇಕು! ಮಲಯಾಳಂ, ತೆಲುಗು, ತಮಿಳು, ಕನ್ನಡ, ಹಿಂದಿ, ಒರಿಯಾ, ಬಂಗಾಳಿ, ಸಂಸ್ಕೃತ, ಸಿಂಹಳಿ, ಪಂಜಾಬಿ, ಉರ್ದು, ಜಪಾನೀ, ಜರ್ಮನ್, ಲ್ಯಾಟಿನ್, ಅರೆಬಿಕ್.. ಕೊನೆಗೆ ತುಳು, ಕೊಂಕಣಿ, ಬಡಗ ಹೀಗೆ ಎಲ್ಲ ಭಾಷೆಗಳಲ್ಲೂ ಜಾನಕಿಯಮ್ಮನ ಕಂಠಸಿರಿ ಸರಾಗವಾಗಿ ಹರಿಯಿತು. ಎಸ್ಪಿ ಬಾಲಸುಬ್ರಹ್ಮಣ್ಯಂ, ಯೇಸುದಾಸ್, ಪಿ.ಬಿ.ಶ್ರೀನಿವಾಸ್, ಡಾ.ರಾಜ್‌ಕುಮಾರ್, ಸೌಂದರರಾಜನ್, ಜಯಚಂದ್ರನ್, ಮಲೇಷ್ಯ ವಾಸುದೇವನ್, ಘಂಟಸಾಲ, ಇಳೆಯರಾಜ, ಹರಿಹರನ್, ಧನುಶ್, ಕಿಶೋರ್‌ಕುಮಾರ್, ಅಮಿತ್ ಕುಮಾರ್, ಸುರೇಶ್ ವಾಡ್ಕರ್, ಬಪ್ಪಿ ಲಹರಿ, ಮೊಹಮ್ಮದ್ ಅಝೀಝ್, ಉದಿತ್ ನಾರಾಯಣ್ ಹೀಗೆ ಜಾನಕಿಯವರ ಜತೆಗೂಡಿ ಹಾಡಿದ ಹಳೆ ಹೊಸ ತಲೆಮಾರಿನ ಗಾಯಕರಿಗೆ ಲೆಕ್ಕವಿಲ್ಲ. 70 80ರ ದಶಕದಲ್ಲಿ ಯಾವಾಗ ರೇಡಿಯೊ ಹಾಕಿದರೂ ಪಿಬಿಎಸ್ ಮತ್ತು ಎಸ್.ಜಾನಕಿ ಅಥವಾ ಎಸ್ಪಿ ಬಾಲಸುಬ್ರಹ್ಮಣ್ಯಂ ಮತ್ತು ಎಸ್.ಜಾನಕಿಯವರ ಯುಗಳ ಗೀತೆ. ಮಧ್ಯಾಹ್ನದ ಹೊತ್ತು ಊಟ ಮುಗಿಸಿ ರೇಡಿಯೋಗೆ ತಲೆಯಾನಿಸಿ ಮಲಗಿದ ಕೋಟ್ಯಂತರ ಸಂಗೀತಪ್ರೇಮಿಗಳಿಗೆ ಜಾನಕಿಯಮ್ಮನ ಕಂಠಸಿರಿಯಲ್ಲಿ ತಣ್ಣನೆ ಜೊಂಪು ಹತ್ತಿಲ್ಲವೆಂದರೆ ಕೇಳಿ! ಅದು ಇಡೀ ಎರಡು ದಶಕಗಳ ಮನೆಮನೆಯ ಕಥೆಯೂ ಹೌದು.

ಸಹಸ್ರಾರು ಹಾಡುಗಳನ್ನು ಲೀಲಾಜಾಲವಾಗಿ ಹಾಡಿರುವ ಈ ದಕ್ಷಿಣದ ಕೋಗಿಲೆ, ತುಂಬ ಕಷ್ಟಪಟ್ಟು ಹಾಡಿದ್ದು ಒಂದು ಕನ್ನಡದ ಹಾಡಂತೆ! ಹಾಗೆಂದು ಅವರೇ ಹಿಂದೊಮ್ಮೆ ಗಾಯಕಿ ಚಿತ್ರಾ ಅವರ ಬಳಿ ಹೇಳಿಕೊಂಡಿದ್ದರು. "ಹೇಮಾವತಿ" ಚಿತ್ರದ "ಶಿವಶಿವ ಎನ್ನದ ನಾಲಗೆ ಮೇಲೆ..." ಎನ್ನುವ ಆ ಹಾಡು ತೋಡಿ ಮತ್ತು ಆಭೋಗಿ ಎಂಬ ಎರಡು ಅತ್ಯಂತ ವಿಭಿನ್ನ ರಾಗಗಳ ಮಿಶ್ರಣ. ಎಲ್.ವೈದ್ಯನಾಥನ್ ಸಂಗೀತ. "ಆ ಹಾಡನ್ನು ಇನ್ನೊಬ್ಬರು ಅಷ್ಟು ಚೆನ್ನಾಗಿ ಹಾಡಲು ಸಾಧ್ಯವೇ ಇಲ್ಲ" ಎನ್ನುವುದು ಚಿತ್ರಾ ಅವರ ಉದ್ಗಾರ.

ಗಾಯಕಿಯಾಗಿ ಜಾನಕಿಯಮ್ಮ ಪಡೆದಷ್ಟು ಪ್ರಶಸ್ತಿಗಳು ಮತ್ತು ಬಿರುದುಗಳನ್ನು ಭಾರತದಲ್ಲಿ ಇನ್ನೊಬ್ಬ ಗಾಯಕಿ ಪಡೆದಿರಲು ಸಾಧ್ಯವಿಲ್ಲ. ನಾಲ್ಕು ಸಲ ಅತ್ಯುತ್ತಮ ಗಾಯಕಿಯಾಗಿ ರಾಷ್ಟ್ರಪ್ರಶಸ್ತಿ ಮತ್ತು 32 ರಾಜ್ಯಪ್ರಶಸ್ತಿಗಳು! (ಈ ರಾಜ್ಯಪ್ರಶಸ್ತಿಗಳಲ್ಲಿ ಕನ್ನಡ ಸಿನಿಮಾಗಳದ್ದು ಒಂದೂ ಇಲ್ಲ!) 1977ರಲ್ಲಿ ಪದಿನಾರು ವಯದಿನಿಲೆ ತಮಿಳು ಚಿತ್ರದ ‘ಸೆಂಧೂರ ಪೂವೆ’, 81ರಲ್ಲಿ ಒಪ್ಪೋಲ್ ಮಲಯಾಳಂ ಚಿತ್ರದ ‘ಎಟ್ಟುಮಾನೂರಂಬಾಲತ್ತಿಲ್...’ ಎಂಬ ಹಾಡು, 84ರಲ್ಲಿ ಸಿತಾರಾ ತೆಲುಗು ಚಿತ್ರದ ‘ವೆನ್ನೊಲೊ ಗೋದಾರಿ ಅಂಧಂ...’ ಮತ್ತು 92ರಲ್ಲಿ ‘ದೇವರ್ ಮಗನ್’ ಚಿತ್ರದ ‘ಇಂಜಿ ಇಡುಪ್ಪಳಗ..’ ಹಾಡುಗಳು ರಾಷ್ಟ್ರಪ್ರಶಸ್ತಿಯನ್ನು ಗೆದ್ದುಕೊಟ್ಟವು. ಈ ನಾಲ್ಕೂ ಹಾಡುಗಳು ಇವತ್ತಿಗೂ ದಕ್ಷಿಣ ಭಾರತದ ಚಿತ್ರರಂಗದ ಎವರ್‌ಗ್ರೀನ್ ಹಾಡುಗಳೇ.

ಐದು ಪೀಳಿಗೆಗಳ ಕೋಟ್ಯಂತರ ಕಿವಿಗಳನ್ನು ತಂಪಾಗಿಸಿರುವ ಜಾನಕಿಯಮ್ಮ ಅವರನ್ನು ಹುಡುಕಿಕೊಂಡು ಬಂದ ಪ್ರಶಸ್ತಿಗಳಿಗೂ ಲೆಕ್ಕವಿಲ್ಲ. ಮೈಸೂರು ವಿವಿ ಗೌರವ ಡಾಕ್ಟರೇಟ್ ಮತ್ತು ಕಲೈಮಾಮಣಿ ಸಹಿತ 30ಕ್ಕೂ ಹೆಚ್ಚು ಪ್ರತಿಷ್ಠಿತ ಪ್ರಶಸ್ತಿಗಳು. ಆದರೆ ಈ ಮಾಧುರ್ಯ ರಾಣಿಯನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸುವ ಕೆಲಸ ಮಾತ್ರ ತಡವಾಗಿ ನಡೆಯಿತು. 2013ರಲ್ಲಿ ಕೇಂದ್ರ ಸರ್ಕಾರ ‘ಪದ್ಮಭೂಷಣ’ ಪ್ರಕಟಿಸಿದಾಗ ಸಹಜವಾಗಿಯೇ ಜಾನಕಿಯಮ್ಮ ‘ತುಂಬ ತಡವಾಗಿ ಬಂದಿದೆ, ನನಗೆ ಬೇಡ’ ಎಂದು ಗಟ್ಟಿಧ್ವನಿಯಲ್ಲಿ ನಿರಾಕರಿಸಿದರು. ಈಗ 78ರ ಇಳಿವಯಸ್ಸಿನಲ್ಲಿ (ಬರ್ತ್‌ಡೇ 23–4–1938) ಹಾಡು ಸಾಕಾಗಿ ವಿಶ್ರಾಂತಿ ಬೇಕಾಗಿರುವುದು ಅಸಹಜವೇನಲ್ಲ. ಆದರೆ ಒಂದಂತೂ ನಿಶ್ಚಿತ: ಇನ್ನು ಐದು ತಲೆಮಾರುಗಳು ಕಳೆದರೂ ಎಸ್.ಜಾನಕಿಯವರ ಹಾಡುಗಳಿಗೆ ಯಾವ ಕಿವಿಯೂ ‘ನೋ’ ಎನ್ನುವ ಸಾಧ್ಯತೆ ಇಲ್ಲ!

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65